

ಚಿತ್ರಕೃಪೆ: ವಿಕಿಕಾಮನ್ಸ್

# ಶಾರ್ಜಾ@300

**ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿರುವ ಶಾರ್ಜಾ ಕ್ರಿಕೆಟ್ ಕ್ರೀಡಾಂಗಣ ಜಗತ್ತಿನಲ್ಲಿಯೇ ಅತಿ ಹೆಚ್ಚು ಅಂತರರಾಷ್ಟ್ರೀಯ ಪಂದ್ಯಗಳಿಗೆ ಆತಿಥ್ಯ ವಹಿಸುವ ಮೂಲಕ 'ಶಾರ್ಜಾ@300' ಗೌರವಕ್ಕೆ ಭಾಜನವಾಗಿದೆ.**

■ ಪ್ರಮೋದ ಕುಲಕರ್ಣಿ

ಪ್ರತಿಯೊಬ್ಬ ಕ್ರಿಕೆಟಿಗನಿಗೆ ಮೊದಲ ಅರ್ಧ ಶತಕ, ಶತಕ, ವಿಕೆಟ್, ಕ್ಯಾಚ್, ಸ್ಟಂಪ್ ಔಟ್, ಬೌಂಡರಿ, ಸಿಕ್ಸರ್, ಪದಾರ್ಪಣೆ ಹೀಗೆ ಪ್ರತಿ 'ಮೊದಲುಗಳು' ಖುಷಿಕೊಡುವ ಹಾಗೂ ಜೀವಮಾನವಿಡೀ ನೆನಪಿನಲ್ಲುಳಿಯುವ ಸಂಗತಿಗಳು. ಇಂಥ ಹಲವಾರು ಖುಷಿಯ ಗಳಿಗೆಗೆ ಶಾರ್ಜಾದ ಕ್ರಿಕೆಟ್ ಕ್ರೀಡಾಂಗಣ ನಾಲ್ಕು ದಶಕಗಳಿಂದ ಸಾಕ್ಷಿಯಾಗುತ್ತಲೇ ಬಂದಿದೆ.

ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿರುವ ಶಾರ್ಜಾ ಕ್ರಿಕೆಟ್ ಕ್ರೀಡಾಂಗಣ ಜಗತ್ತಿನಲ್ಲಿಯೇ ಅತಿ ಹೆಚ್ಚು ಅಂತರರಾಷ್ಟ್ರೀಯ ಪಂದ್ಯಗಳಿಗೆ ಆತಿಥ್ಯ ವಹಿಸುವ ಮೂಲಕ 'ಶಾರ್ಜಾ@300' ಗೌರವಕ್ಕೆ ಭಾಜನವಾಗಿದೆ. ಕಳೆದ ವಾರ ಅಫಘಾನಿಸ್ತಾನ ಹಾಗೂ ಬಾಂಗ್ಲಾದೇಶ ತಂಡಗಳ ನಡುವಿನ ಏಕದಿನ ಪಂದ್ಯಕ್ಕೆ ಆತಿಥ್ಯ ವಹಿಸುವ ಮೂಲಕ ಶಾರ್ಜಾದ ಅಂಗಳ ಈ ಹೆಗ್ಗಳಿಕೆ ಪಡೆದುಕೊಂಡಿತು.

ಶಾರ್ಜಾ ಕ್ರೀಡಾಂಗಣದಲ್ಲಿ ಇದುವರೆಗೆ 253 ಏಕದಿನ, ಒಂಬತ್ತು ಟೆಸ್ಟ್ ಮತ್ತು 38 ಅಂತರರಾಷ್ಟ್ರೀಯ ಟಿ–20 ಪಂದ್ಯಗಳು ನಡೆದಿವೆ. ಆಸ್ಟ್ರೇಲಿಯಾದ ಸಿಡ್ನಿ ಮೈದಾನ (ಒಟ್ಟು 291 ಪಂದ್ಯಗಳು), ಮೆಲ್ಬರ್ನ್ (287), ಜಿಂಬಾಬ್ವೆಯ ಹರಾರೆ (267) ಹಾಗೂ ಲಂಡನ್‌ನ ಲಾರ್ಡ್ಸ್ (227) ಕ್ರೀಡಾಂಗಣಗಳು ಹೆಚ್ಚು ಪಂದ್ಯಗಳಿಗೆ ಆತಿಥ್ಯ ವಹಿಸಿದ ಸಾಧನೆಯಲ್ಲಿ ಕ್ರಮವಾಗಿ ನಂತರದ ಸ್ಥಾನಗಳನ್ನು ಗಳಿಸಿವೆ.

ಶಾರ್ಜಾ ಅಂಗಳವನ್ನು 1980ರಲ್ಲಿ ನಿರ್ಮಾಣ ಮಾಡಿದ್ದರೂ 4 ವರ್ಷಗಳ ಬಳಿಕ ಏಷ್ಯಾ ಕಪ್ ಟೂರ್ನಿಯಲ್ಲಿ ಮೊದಲ ಬಾರಿ ಏಕದಿನ ಅಂತರರಾಷ್ಟ್ರೀಯ ಪಂದ್ಯಕ್ಕೆ ಆತಿಥ್ಯ ವಹಿಸಿತ್ತು. 2002ರಲ್ಲಿ ಚೊಚ್ಚಲ ಟೆಸ್ಟ್, 2016ರಲ್ಲಿ ಮೊದಲ ಟಿ–20 ಪಂದ್ಯಗಳು ನಡೆದಿದ್ದವು. ಈ ಕ್ರೀಡಾಂಗಣ ಅಫಘಾನಿಸ್ತಾನ ತಂಡಕ್ಕೆ ತವರಿನ ಅಂಗಳವಾಗಿತ್ತು.

ಹಲವಾರು ಅಂತರರಾಷ್ಟ್ರೀಯ ಕ್ರಿಕೆಟಿಗರು ಪಾಲ್ಗೊಂಡಿದ್ದ ಟಿ–10 ಲೀಗ್, 2018ರಲ್ಲಿ ಅಂಧರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯ, 2021ರ ಐಸಿಸಿ ಪುರುಷರ ಟಿ–20 ವಿಶ್ವಕಪ್ ಟೂರ್ನಿಗೂ ಆತಿಥ್ಯ ವಹಿಸಿತ್ತು. ಈ ಕ್ರೀಡಾಂಗಣ ಉದ್ಯಮಿ ಹಾಗೂ ಕ್ರಿಕೆಟ್ ಬಗ್ಗೆ ಅಪರಿಮಿತ ಪ್ರೀತಿ ಹೊಂದಿದ್ದ ಅಬ್ದುಲ್ ರೆಹಮಾನ್ ಬುಖಾತಿರ್ ಅವರ ಕನಸಿನ ಕೂಸು. 80ರ ದಶಕದಲ್ಲಿ ಕ್ರಿಕೆಟ್ ಚಟುವಟಿಕೆಗಾಗಿಯೇ ಮೀಸಲಾದ ಯುಎಇ ರಾಷ್ಟ್ರದ ಮೊದಲ ಕ್ರೀಡಾಂಗಣ ಇದಾಯಿತು.

ನಿರಂತರವಾಗಿ ಕ್ರಿಕೆಟ್ ನಡೆಯುವಂತೆ ನೋಡಿಕೊಳ್ಳಲು ಆರಂಭದಲ್ಲಿ ಗವಾಸ್ಕರ್ ಇಲೆವೆನ್, ಮಿಯಾಂದಾದ್ ಇಲೆವೆನ್ ಎನ್ನುವ ಹೆಸರಿನಲ್ಲಿ ಪ್ರಾಯೋಜಕತ್ವ ಟೂರ್ನಿಗಳನ್ನು ನಡೆಸಲಾಯಿತು. ಇದರಿಂದ ಲಭಿಸಿದ ಪ್ರಚಾರ, ಖ್ಯಾತಿಯಿಂದಾಗಿ ಏಷ್ಯಾ ಕಪ್ ಪಂದ್ಯಗಳಿಗೆ ಆತಿಥ್ಯ ವಹಿಸುವ ಅವಕಾಶ ಲಭಿಸಿತು. ಸಾಂಪ್ರದಾಯಿಕ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ಕ್ರಿಕೆಟ್ ತಂಡಗಳ ನಡುವಿನ ಪಂದ್ಯಗಳಿಗೆ 1980 ಹಾಗೂ 90ರ ದಶಕದ ಆರಂಭದಲ್ಲಿ ಶಾರ್ಜಾ ಅಂಗಳವೇ ವೇದಿಕೆಯಾಗಿತ್ತು. ಹೀಗಾಗಿ ಏಷ್ಯಾ ದೇಶಗಳ ಜನರನ್ನು ಶಾರ್ಜಾ ಬಹುಬೇಗ ಆಕರ್ಷಿಸಿತು.

ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳ ವೇಳಾಪಟ್ಟಿ ಇಲ್ಲದಾಗ ಹಿರಿಯ ಕ್ರಿಕೆಟಿಗರ ಹೆಸರಿನಲ್ಲಿ ಪ್ರಾಯೋಜಕತ್ವ ಟೂರ್ನಿಗಳು ಮತ್ತು ಅಬ್ದುಲ್ ರೆಹಮಾನ್ ಬುಖಾತಿರ್ ಸ್ಥಾಪಿಸಿದ ದಿ ಕ್ರಿಕೆಟರ್ಸ್ ಬೆನಿಫಿಟ್ ಫಂಡ್ ಟೂರ್ನಿಗಳು ನಡೆದವು. ಆರಂಭದಲ್ಲಿ ಕಡಿಮೆ ಸಂಖ್ಯೆಯ ಆಸನ ಸಾಮರ್ಥ್ಯ ಹೊಂದಿದ್ದ ಕ್ರೀಡಾಂಗಣ ಈಗ 16 ಸಾವಿರಕ್ಕಿಂತಲೂ ಹೆಚ್ಚಿದೆ.

ರೋಚಕ ಪಂದ್ಯಗಳು, ಸೌಂದರ್ಯದಿಂದಾಗಿ ಕ್ರೀಡಾಂಗಣದ ಜನಪ್ರಿಯತೆ ಉತ್ತುಂಗಕ್ಕೆ ಏರಿತು. ಶಾರ್ಜಾದಲ್ಲಿ ಕ್ರಿಕೆಟ್ ಆಡುವುದು ಬದುಕಿನ ದೊಡ್ಡ ಅವಕಾಶ ಎನ್ನುವ ಭಾವ ಆಟಗಾರರಲ್ಲಿ ಮೂಡಿತು. ಮ್ಯಾಚ್ ಫಿಕ್ಸಿಂಗ್ ವಿವಾದಗಳೂ ಅಂಟಿಕೊಂಡವು. ಇದೇ ಕ್ರೀಡಾಂಗಣದಲ್ಲಿ ಮೂರು ವರ್ಷಗಳಿಂದ ಐಪಿಎಲ್ ಮಾದರಿಯಲ್ಲಿಯೇ ಟಿ–20 ಇಂಟರ್‌ನ್ಯಾಷನಲ್ ಲೀಗ್ ಟೂರ್ನಿ ನಡೆಯುತ್ತದೆ. ಆ ಟೂರ್ನಿಯಲ್ಲಿ ಶಾರ್ಜಾ ವಾರಿಯರ್ ಹೆಸರಿನ ತಂಡವೂ ಸ್ಪರ್ಧಿಸುತ್ತಿದೆ.

## ಭಾರತದ ನಂಟು

ಶಾರ್ಜಾದ ಕ್ರೀಡಾಂಗಣ ಭಾರತದ ಕ್ರಿಕೆಟ್ ಲೋಕದೊಂದಿಗೆ ಅಗಾಧ ನಂಟು ಹೊಂದಿದೆ. 2014ರಲ್ಲಿ ಭಾರತದಲ್ಲಿ ಸಾರ್ವತ್ರಿಕ ಲೋಕಸಭಾ ಚುನಾವಣೆ ನಡೆದಾಗ ಐಪಿಎಲ್ ಪಂದ್ಯಗಳನ್ನು ನಡೆಸಲಾಗಿತ್ತು. 2020 ಹಾಗೂ 2021ರಲ್ಲಿ ಕೋವಿಡ್ ಕಾಡಿದಾಗಲೂ ಶಾರ್ಜಾ ಸೇರಿದಂತೆ ಯುಎಇ ರಾಷ್ಟ್ರದ ವಿವಿಧ ಕ್ರೀಡಾಂಗಣಗಳಲ್ಲಿ ಪಂದ್ಯಗಳು ನಡೆದಿದ್ದವು. ಕಳೆದ ವರ್ಷ ಸಚಿನ್ ತೆಂಡೂಲ್ಕರ್ ತಮ್ಮ 50ನೇ ವಸಂತಕ್ಕೆ ಕಾಲಿಟ್ಟಾಗ ಕ್ರೀಡಾಂಗಣದ ಪಶ್ಚಿಮ ಭಾಗದಲ್ಲಿರುವ ಸ್ಟ್ಯಾಂಡ್‌ಗೆ ಸಚಿನ್ ಹೆಸರಿಟ್ಟು ಅಲ್ಲಿನ ರಾಷ್ಟ್ರ ಗೌರವ ಸಲ್ಲಿಸಿತ್ತು. ಅನೇಕ ದಾಖಲೆಗಳ ಒಡೆಯರಾದ ಮಾಸ್ಟರ್ ಬ್ಲಾಸ್ಟರ್ ಸಚಿನ್ 1998ರಲ್ಲಿ ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ ಶಾರ್ಜಾದಲ್ಲಿ ಶತಕ ಗಳಿಸಿ ತಂಡಕ್ಕೆ ಗೆಲುವು ತಂದುಕೊಟ್ಟಿದ್ದರು. ಈ ಮೈದಾನದಲ್ಲಿ ಏಳು ಶತಕಗಳನ್ನು ಹೊಡೆದಿದ್ದಾರೆ. ■